ಪಿ.ಜೆ. ರಾಘವೇಂದ್ರ, ಮೈಸೂರು

*ಹೇರ್‌ಡೈ ಲೇಪಿತ ಕೂದಲನ್ನು ದೇವರಿಗೆ ಮುಡಿ ಕೊಡುವುದು ಸರಿಯೆ?*



'ಪ್ಲೀಸ್ ಸೇವ್ ಮಿ ಈವನ್ ಆಫ್ಟರ್ ಐ ಡೈ' ಎಂದು ಕೇಳಿಕೊಳ್ಳುವುದರಿಂದ, ಸರಿ!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಮಿಲ್ಟ್ರಿ ಹೋಟೇಲ್ ಎಂದು ಬೋರ್ಡ್ ಹಾಕಿರುತ್ತಾರಲ್ಲ, ಅಲ್ಲಿ ಮಿಲಿಟರಿಯವರಿಗೆ ಮಾತ್ರ ಆದ್ಯತೆಯೆ?*

ಊಹೂಂ. ಮಿಲ್ಟ್ರಿಯಲ್ಲಿಯಂತೆಯೇ ಸಾವನ್ನು ಅರಗಿಸಿಕೊಳ್ಳುವವರಿಗೆ ಮಾತ್ರ ಆದ್ಯತೆ.

ಆರ್. ಮಧುಸೂದನ್, ಹಾಸನ

*ಜೇನಿನ ಸಿಹಿಗೂ, ನಲ್ಲೆಯ ಅಧರದ ಸಿಹಿಗೂ ವ್ಯತ್ಯಾಸ ಕಂಡುಹಿಡಿಯುವುದು ಹೇಗೆ?*

ಅಧರದ್ದು ಹಿಂತಿರುಗಿಸಿದ ನಂತರವೂ ಉಳಿಯುವ ಸಿಹಿ.

ಕುಮಾರ್ ಎಂ.ಎ., ಬೆಂಗಳೂರು

*ದೇವರ ಮೇಲಿನ ಹೂವನ್ನು ಭಕ್ತಿಯಿಂದ ಸ್ವೀಕರಿಸುವ ನಾವು ಕಳೇಬರದ ಮೇಲಿನ ಹೂವನ್ನು ಕಡೆಗಣಿಸುವುದೇಕೆ?*



ಸ್ಥಾನಮಹಿಮೆ. ಉತ್ತಮರ ಸಂಗ ಗೌರವದುತ್ತುಂಗ; ಅಲ್ಪರ ಸಂಗ ಅಭಿಮಾನ ಭಂಗ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

*ನಮ್ಮ ಮುಂದೆ ಸಿಹಿ ನುಡಿಯುತ್ತಾರೆ, ಹಿಂದೆ ಕಹಿ ನುಡಿಯುತ್ತಾರೆ. ಏಕೆ?*

ಸಮಾಜದ ಕಟ್ಟಡವೇ ಹಾಗೆ; ಹೊರಾಂಗಣ ಮೆಚ್ಚಲು; ಒಳಾಂಗಣ ಬಚ್ಚಲು.

ಆರತಿ ಘಟಿಕಾರ್, ದುಬೈ

*ನನ್ನ ಸೋಮಾರಿತನವನ್ನೂ ಓಎಲ್‌ಎಕ್ಸ್‌ನಲ್ಲಿ ಮಾರುವ ಹಾಗಿದ್ದರೆ ಹೇಗಿರುತ್ತಿತ್ತು?*

ವಿಧಾನಸೌಧದವರು ಒಳ್ಳೆಯ ಬೆಲೆಗೆ ಕೊಳ್ಳುತ್ತಿದ್ದುದರಿಂದ ಹೆಚ್ಚು ಹೆಚ್ಚು ಸೋಮಾರಿತನ ಬೆಳೆಸಲು ಪ್ರೇರೇಪಣೆ ಆಗುತ್ತಿತ್ತು.

ತಲಕಾಡು ಶ್ರೀನಿಧಿ, ಬೆಂಗಳೂರು

*ನಿಜ ಸ್ನೇಹಕ್ಕೂ, ಸಾಮಾಜಿಕ ಜಾಲತಾಣದ ಸ್ನೇಹಕ್ಕೂ ವ್ಯತ್ಯಾಸ ಏನು ಗುರುಗಳೇ?*

ನಿಜಸ್ನೇಹದಲ್ಲಿ ವಾದಕ್ಕೆ ಅವಕಾಶ ಉಂಟು. ಜಾಲತಾಣ ಸ್ನೇಹದಲ್ಲಿ ಅಯ್ಯಾ ಎಂದರೆ ಲೈಕು; ಎಲವೋ ಎಂದರೆ ಬ್ಲಾಕು.

ಎಚ್.ಆರ್. ಕಡಿವಾಲ, ಬಾದಾಮಿ

*ಕೆಲವರ ಹೆಸರು ಕೇಳಿದರೆ ಹೆಣ್ಣು ಅಥವಾ ಗಂಡು ಅನ್ನುವುದೇ ಗೊತ್ತಾಗುವುದಿಲ್ಲವಲ್ಲ...?*

ಕಿವಿಯೋಲೆಗಳನ್ನು ಮುಂದಿರಿಸಿ; ಒಂದೇ ತೊಟ್ಟರೆ ಗಂಡು; ಎರಡೂ ತೊಟ್ಟರೆ ಹೆಣ್ಣು.

ಎಚ್.ಆರ್. ದೇಸಾಯಿ, ರಾಯಚೂರು

*ಪ್ರೇಮಿಗಳ ದಿನಾಚರಣೆ ಆಚರಿಸುವ ನಾವು ಗಂಡ- ಹೆಂಡಿರ ದಿನಾಚರಣೆ ಏಕೆ ಆಚರಿಸುವುದಿಲ್ಲ?*

ಹುಚ್ಚಪ್ಪ; ನಿತ್ಯೋತ್ಸವಕ್ಕೆ ವಾರ್ಷಿಕೋತ್ಸವದ ಅಗತ್ಯವಿಲ್ಲ.

ಫಾಲನೇತ್ರ ಸಜ್ಜನ, ಶಿರಸಿ

*ಪಾಲಿಥಿನ್ ಬ್ಯಾಗ್ ಮಾರುವ ಅಂಗಡಿ ಜಪ್ತಿ ಮಾಡುವ ಅಧಿಕಾರಿಗಳು ಸಂಬಂಧಿತ ಫ್ಯಾಕ್ಟರಿಗಳನ್ನೇಕೆ ಬಂದ್ ಮಾಡಿಸುವುದಿಲ್ಲ?*

ಕೊಂಬೆ ಸವರಿದರೆ ಮತ್ತೆ ಚಿಗುರಿ ಫಲ ನೀಡೀತು; ಬುಡ ಕತ್ತರಿಸಿದರೆ ಫಲ ದೊರಕದಲ್ಲ.

ಸುಮಾ ರಮೇಶ್, ಹಾಸನ

*ಮಕ್ಕಳಿಗೆ ಬಾಲ್ಯದಿಂದಲೇ ಪ್ರತ್ಯೇಕ ಕೊಠಡಿ ಕೊಟ್ಟು ನಂತರ ಒಗ್ಗಟ್ಟಾಗಿರಿ ಎಂದರೆ ಹೇಗೆ ಸಾಧ್ಯ?*

ಒಳ್ಳೆಯ ಯೋಚನೆ; ಆದರೆ ದಂಪತಿಗಳ ಕಾಯದ ಕಾವಿಗೆ ಬಾಲ್ಯದ ಬಲಿ ಆಗುವುದು ಆಧುನಿಕತೆಯ ದುರಂತ.

ಕುಮಾರ್ ಎಂ.ಎ., ಬೆಂಗಳೂರು

*ತೇರು ಎಳೆಯಲು ಸಾವಿರಾರು ಜನ ಮುಂದೆ ಬರುತ್ತಾರೆ. ಶವಕ್ಕೆ ಹೆಗಲು ಕೊಡಲು ಹಿಂದೆಮುಂದೆ ನೋಡುವರಲ್ಲಾ...?*

ಸರಿಯೆ. ತೇರಿಗೆ ಮುಂದೆ ಮಾತ್ರ ಜನ ಸಾಕು. ಶವಕ್ಕೆ ಹಿಂದೆ ಮುಂದೆ ಎರಡೂ ಕಡೆ ಬೇಕಲ್ಲ.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಬ್ರಹ್ಮ ಬರೆದ ಹಣೆಬರಹವನ್ನು ಅಳಿಸಿ ತಾಯಿ ಬೇರೆ ಬರೆಯುವ ಹಾಗಿದ್ದಿದ್ದರೆ?*

ಗುಡ್. ಆ ನಿಟ್ಟಿನಿಂದಾದರೂ ಎಲ್ಲಾ ತಾಯಂದಿರು ಅಕ್ಷರಸ್ಥರಾಗುತ್ತಿದ್ದರು.

ಕೆ.ಎಂ. ವಿಭೂತಿ, ಹರಿಹರ

*ಇಲ್ಲೊಬ್ಬ ನವನಟಿಗೆ ಮರ ಸುತ್ತುವ ಪಾತ್ರ ಬೇಡವಂತೆ. ಏನಿರಬಹುದು ಕಾರಣ?*

ಡಸ್ಟ್ ಅಲರ್ಜಿ.

ಕೆ.ಎಂ. ಲಿಂಗರಾಜು, ನಂಜನಗೂಡು

*ಕಂಗಳ ಹುಬ್ಬಿಗೂ, ರಸ್ತೆಯ ಉಬ್ಬಿಗೂ ಏನು ವ್ಯತ್ಯಾಸ?*

ಏರಿದಷ್ಟೂ ಉಬ್ಬು ವೇಗ ನಿಯಂತ್ರಕ; ಹುಬ್ಬು ಆವೇಗ ನಿಯಂತ್ರಕ.

ಸುಶೀಲ ಬಿ.ಆರ್. ರಾಮಣ್ಣ, ಬೆಂಗಳೂರು

*ದೇವರು ಪ್ರತ್ಯಕ್ಷನಾಗಿ ಬೇಡಿದ ವರ ನೀಡಿ ಜಿಎಸ್‌ಟಿ ಅಪ್ಲೈ ಆಗುತ್ತದೆ ಎಂದಿದ್ದಾನಲ್ಲಾ...?*




ಗುಡ್. ಜಿ– ಗುಡ್‌ನೆಸ್; ಎಸ್– ಸಿಂಪ್ಲಿಸಿಟಿ; ಟಿ– ಟ್ರೂತ್‌ಫುಲ್‌ನೆಸ್ ಎಲ್ಲಕ್ಕೂ ಅನ್ವಯಿಸಬೇಕಾದ್ದೇ.

ಡೈರಿ ವಿಶ್ವನಾಥ್, ಬೆಂಗಳೂರು

*ಬರೆದಂತೆ ನಡೆಯುವವರು ಇದ್ದಾರಾ?*

ಇದ್ದಾರೆ. ಕುಡುಕರು. ಅವರ ಬರವಣಿಗೆಯಷ್ಟೇ ಅವರ ನಡೆಯೂ ಸೊಟ್ಟವಾಗಿರುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

*ಕಾನೂನು ಯಾವಾಗಲೂ ಶ್ರೀಮಂತರ ಸುತ್ತಲೇ ಓಡಾಡುತ್ತಿರುತ್ತದಲ್ಲ...?*

ಆಧುನಿಕ ಕಾನೂನಿನ ವ್ಯಾಖ್ಯಾನವೇ ಹಾಗಿದೆ – ಖಾನಾ (ತಿನ್ನುವುದಕ್ಕೆ) ಊನ ಆಗದಂತೆ ನೋಡಿಕೊಳ್ಳುವುದೇ ಕಾನೂನು!

ವಿದ್ಯಾ ಎನ್. ಪೈ, ಕಾಸರಕೋಡ

*ಮನೆ ಬೆಳಗುವುದು ಗಂಡಿನಿಂದಲೋ, ಹೆಣ್ಣಿನಿಂದಲೋ?*

ಯಾರು ಕರೆಂಟ್ ಬಿಲ್‌ಗೆ ಹಣ ಕೊಡುವರೋ ಅವರಿಂದ.

■ ರಾಮ್